ಮೊದಲಿನ ಹಾಗಿಲ್ಲ ಎನಿಸಿತು. ಹೌದಲ್ವಾ... ಮನೆಯ ಸುತ್ತ ಇದ್ದ ಗುಲಾಬಿ, ಮಲ್ಲಿಗೆ ಹೂವಿನ ಗಿಡಗಳು ಎಲ್ಲಿ ಹೋದವು? ಕೆಲಸದವಳ ಹತ್ತಿರ ಕೇಳಿದಾಗ ಪ್ರಭು ಗಿಡಗಳನ್ನೆಲ್ಲಾ ಕಡಿಸಿದ್ದು ಗೊತ್ತಾಯಿತು. ಕಾರಣ ಅವಳಿಗೂ ಗೊತ್ತಿಲ್ಲವೆಂದಳು. ಮನೆಯ ಒಳಗೂ ಬಹಳಷ್ಟು ಖಾಲಿ ಖಾಲಿ ಎನಿಸಿತು. ಆಶ್ಚರ್ಯವಾಯಿತು, ಮನಸ್ಸು ಮತ್ತೇನೋ ಕೆಟ್ಟದರ ಸುಳಿವು ಕೊಟ್ಟಿತು. 15-20 ದಿನಗಳಿಂದೀಚೆಗೆ ಪ್ರಭು ಆಫೀಸಿನ ವಿಚಾರ ಯಾವುದೂ ಹೇಳದಿರುವುದು ನೆನಪಿಗೆ ಬಂತು. ಕೇಳಿದರೂ 'ನಿಂಗೆ ಟೆನ್ಷನ್ ಬೇಡ ಕಣೇ' ಎಂದು ಬಾಯಿ ಮುಚ್ಚಿಸುತ್ತಿದ್ದನಲ್ವಾ? ಆಫೀಸಿಗೆ ಫೋನ್ ಮಾಡಿದ್ದೆ, ಪ್ರಭು ಎಲ್ಲವನ್ನೂ ನೋಡಿಕೊಳ್ಳುತ್ತಿರುವುದಾಗಿ ತಿಳಿದು ಸುಮ್ಮನಾಗಿದ್ದೆ. ಎಷ್ಟಾದರೂ ಪ್ರಭುವಿನ ತಂದೆ ಫ್ಯಾಕ್ಟರಿಯನ್ನು ಶುರುಮಾಡಿ ಬೆಳೆಸಿದ್ದು. ಫ್ಯಾಕ್ಟರಿಯೂ ಅವನ ಹೆಸರಿಗಿದೆ. ಇರಲಿ ಈಗಲಾದರೂ ಜವಾಬ್ದಾರಿ ಬಂತು ಎಂದುಕೊಂಡು ಸುಮ್ಮನಾದೆ.

ಸಂಜೆಯಾಗುತ್ತಲೇ ಮನೆಗೆ ಬಂದ ಪ್ರಭು, 'ವಿದ್ಯಾ... ಆರಾಮ ತಾನೇ? ಸಾರಿ ಆಸ್ಪತ್ರೆಗೆ ಬರಲಾಗಲಿಲ್ಲ. ಡಾಕ್ಟರ್ ಹತ್ರ ಫೋನಿನಲ್ಲಿ ಮಾತನಾಡಿದೆ. ನೀನು ಹೆಚ್ಚು ಟೆನ್ಷನ್ ತಗೋಬಾರ್ದು ಎಂದಿದಾರೆ. ಆರಾಮವಾಗಿರು. ಮೇಗಝೀನ್ ತಂದಿದೀನಿ ಓದುತ್ತಿರು' ಎಂದು ತನ್ನ ಪಾಡಿಗೆ ತಾನಿದ್ದ. 'ವಿದೂ, ವಿದೂ' ಎನ್ನುತ್ತಾ ಹಿಂದೆ, ಮುಂದೆ ಓಡಾಡಿಕೊಂಡಿದ್ದವ ಇವನೇನಾ? ಈಗ 'ವಿದ್ಯಾ' ಎಂದು ಕರೆಯುತ್ತಿದ್ದಾನೆ, ಅಲ್ಲದೆ ಮುಖ ನೋಡದೆ ಮಾತನಾಡುತ್ತಿದ್ದಾನೆ... ಇದು ಯಾವುದರ ಸಂಕೇತ? ಏನಾದರೂ ಮಾಡಿಕೊಳ್ಳಲಿ ಎಂದು ಸುಮ್ಮನಾದರೂ ಎರಡು ದಿನ ಬಿಟ್ಟು ಕೇಳಿಯೇ ಬಿಟ್ಟೆ. ಪ್ರಭು ಮೆಲ್ಲನೆ, 'ನಾನೇ ನಿನ್ನ ಹತ್ರ ಹೇಳಬೇಕಂತ ಇದ್ದೆ, ಎಲ್ಲನೂ ಚೆನ್ನಾಗೇ ನಡೀತಾ ಇದೆ. ಫ್ಯಾಕ್ಟರಿ ಮ್ಯಾನೇಜ್ಮೆಂಟ್ ಅರಿತುಬಿಟ್ಟೆ. ನನ್ನ ಅಪ್ಪನ ಕನಸು ಸಹ ಅದೇ ಆಗಿತ್ತು. ಎಲ್ಲಾ ಸರಿಯಾದರೆ ಇನ್ನೊಂದು ಬ್ರಾಂಚ್ ಓಪನ್ ಮಾಡಬೇಕಂತ ಇದೀನಿ ಕಣೇ'.

ಕೇಳಿ ಖುಷಿಯಾಯ್ತು 'ಪ್ರಭು... ಎಲ್ಲಾ ಒಳ್ಳೆಯದೇ ಆಯ್ತು. ನಾನೂ ಆಫೀಸಿಗೆ ಬರೋಣ ಅಂತ, ಮನೇಲಿ ಕೂತು ಬೇಜಾರು'.

'ವಿದ್ಯಾ ಇನ್ನೊಂದು ವಿಷಯ, ಅದೇ ಜ್ಯೋತಿಷಿಗಳಂದ್ರು ಹಸಿರು ಬಣ್ಣ ನನಗೆ ಸರಿ ಬರೋಲ್ಲವಂತೆ, ಆದರಲ್ಲೂ ಬೆಕ್ಕಿನ ಕಣ್ಣು ಇರೋರಿಂದ ದೂರವಿರಬೇಕೆಂದ್ರು. ನಿಂದು ಒಂದು ತರಹದಲ್ಲಿ ತಿಳಿ ಹಸುರು ಬಣ್ಣದ ಕಣ್ಣು ಅಲ್ವಾ? ಹಾಗಾಗಿ ಸ್ವಲ್ಪ ದೂರನೇ ಉಳಿದೆ. ಬೇಕಿದ್ರೆ ಊರಿಗೆ ಹೋಗಿ ಬಾ. ಊರಿನಲ್ಲಿ ಅಜ್ಜ ಇದ್ದ ಮನೆಯಲ್ಲಿ ಯಾರೂ ಇಲ್ಲ' ಎಂದ. ನಿಂತ ನೆಲವೇ ಕುಸಿದ ಹಾಗಾಯಿತು. ಫ್ಯಾಕ್ಟರಿ, ಗಂಡ ಎಲ್ಲವೂ ನನ್ನ ಸರ್ವಸ್ವ ಎಂದುಕೊಂಡಿದ್ದೆ. ಸಮಯ, ಸ್ಥಿತಿ ಬದಲಾಗಲು ಹೆಚ್ಚು ಹೊತ್ತು ಬೇಕಿಲ್ಲ. ಕೇವಲ ಒಂದೆರಡು ತಿಂಗಳಲ್ಲಿ ಎಲ್ಲವೂ ಕೈಜಾರಿತು. ಒಟ್ಟಿನಲ್ಲಿ ಜ್ಯೋತಿಷಿಯೊಬ್ಬನ ಕೈಯಲ್ಲಿ ನನ್ನ ವರ್ತಮಾನ, ಭವಿಷ್ಯವಿದೆ ಎಂದಾಯಿತು. ನಮ್ಮಿಬ್ಬರನ್ನೂ ದೂರ ಮಾಡಲು ಜ್ಯೋತಿಷಿ ಹೂಡಿದ ತಂತ್ರವಿದೆಂದು ಗೊತ್ತಾಯಿತು. ಅಲ್ಲದೆ ಪ್ರಭುವಿಗೂ ತಾನೇನೂ ಕಡಿಮೆ ಇಲ್ಲ ಎಂದು ಸಾಬೀತು ಪಡಿಸಬೇಕಿತ್ತು. ಹಾಗಾಗಿ ನನ್ನನ್ನು ದೂರವಿಡುತ್ತಿದ್ದಾನೆ ಎನಿಸಿತು. ಚರ್ಚಿಸಿ ಪ್ರಯೋಜನವಿಲ್ಲ. ಏನಾದರಾಗಲಿ ಅವನಿಗೆ ನಾನೂ ಬೇಡವಾದರೆ ನನಗವನು ಬೇಡವೆಂದುಕೊಂಡು ಊರಿಗೆ ಹೊರಟೆ. ಮುಗಿದ ಅಧ್ಯಾಯದ ಪುಟ ತಿರುಗಿಸದಿರಲು ನಿಶ್ಚಯಿಸಿ ಸ್ನೇಹಿತೆಯರು, ಆಫೀಸಿನವರನ್ನು ಕಾಂಟಕ್ಟ್ ಮಾಡದಿರಲು ನಿಶ್ಚಯಿಸಿದೆ.

ತಿಂಗಳು ಉರುಳಿ ವರ್ಷವೂ ಕಳೆಯಿತು. ಪ್ರಭು ಬೆಂಗಳೂರಿಗೆ ಬಾ ಎನ್ನಲಿಲ್ಲ. ನಾನೂ ಹೋಗಲಿಲ್ಲ. ಮೊಬೈಲ್ ಇಬ್ಬರ ಹತ್ತಿರವೂ ಇತ್ತು. ಆದರೆ, ಫೋನ್ ಮಾಡಬೇಕೆಂಬ ಅಪೇಕ್ಷೆ ಇಬ್ಬರಲ್ಲೂ ಇರಲಿಲ್ಲ. ಸಾಧಿಸುವ ಛಲವಿದ್ದರೆ ಏನೂ ಮಾಡಬಹುದು. ಎಲ್ಲಿಯೂ ಮಾಡಬಹುದು ಎನಿಸಿ ಮನೆಯ ಸುತ್ತ ತೋಟ ಮಾಡಿದೆ. ಹಾಲು ಮಾರಾಟಗಾರರ ಸಂಘ ಸ್ಥಾಪಿಸಿದೆ.

ಒಂದು ಬೆಳಿಗ್ಗೆ ಫೋನ್ ರಿಂಗಾಯಿತು. ಬಹಳ ದಿನಗಳ ನಂತರ ಮೊಬೈಲಿನಲ್ಲಿ ಪ್ರಭುವಿನ ಹೆಸರು ಕಾಣಿಸಿತು. ಏನೂ ಅನ್ನಿಸಲಿಲ್ಲ. ಆಗಲೇ ಒಂದು ತರಹದ ನಿರ್ಲಿಪ್ತ ಭಾವವನ್ನು ಬೆಳೆಸಿಕೊಂಡಿದ್ದೆ. 'ವಿದೂ.... ಯಾವಾಗ ಬರ್ತಿ ಹೇಳು? ನೀನಿಲ್ಲದೆ ಬಹಳ ಬೇಜಾರು ಕಣೇ' ಅವನ ಬಾಯಿಂದ 'ವಿದೂ' ಕೇಳಿ ಮನಸ್ಸು ಸ್ವಲ್ಪ ಚಂಚಲವಾಯಿತು. ಆದರೂ, ಮಾತನಾಡಲಿಲ್ಲ. ಅವನೇ ಮಾತು ಮುಂದುವರಿಸುತ್ತಾ